**Media Coverage**

| Publication | Date | Edition | Link | Headline |
|---|---|---|---|---|
| Vijaykarnataka | 10 Feb 2020 | Online | https://vijaykarnataka.com/business/news/will-new-wage-code-hit-your-take-home-pay/articleshow/80882995.cms | ಹೆಚ್ಚಾಗಬಹುದು ಪಿಎಫ್- ಗ್ರ್ಯಾಚುಟಿ, ಆದ್ರೆ ಕೈ ಬರುವ ಸಂಬಳದಲ್ಲಿ ಕಡಿಮೆಯಾಗಲಿದೆಯಾ? |




ಕೇಂದ್ರ ಸರಕಾರವು ನಾಲ್ಕು ಕಾರ್ಮಿಕ ಸಂಹಿತೆಗಳನ್ನು ಏಪ್ರಿಲ್ 1ರಿಂದ ಜಾರಿಗೊಳಿಸಲಿದೆ. ಈ ಪೈಕಿ 'ವೇತನ ಸಂಹಿತೆ'ಯಲ್ಲಿನ ನಿಯಮಗಳಿಂದಾಗಿ ಉದ್ಯೋಗಿಗಳಿಗೆ ಎಲ್ಲಾ ಕಳೆದು ತಿಂಗಳಿಗೆ ಕೈಗೆ ಸಿಗುವ ಸಂಬಳದಲ್ಲಿ ಕಡಿತ ಉಂಟಾಗುವ ಸಾಧ್ಯತೆ ಇದೆ. ಅದೇ ವೇಳೆ, ಉದ್ಯೋಗಿಯ ಪಿಎಫ್, ಗ್ರ್ಯಾಚುಟಿ ಮೊತ್ತ ಹೆಚ್ಚಾಗಬಹುದು.

ಏಪ್ರಿಲ್ 1ರಿಂದ ನಿಮ್ಮ ಕೈ ಬರುವ ಸಂಬಳದಲ್ಲಿ ಕಡಿಮೆಯಾಗಲಿದೆಯಾ?

ಹೌದು. ಇಂಥದೊಂದು ಲೆಕ್ಕಾಚಾರ ಶುರುವಾಗಿದೆ. ಏಪ್ರಿಲ್ 1ರಿಂದ ಹೊಸ 'ವೇತನ ಸಂಹಿತೆ'ಯು ಜಾರಿಗೆ ಬರಲಿದ್ದು, ನೌಕರರ ಕೈಗೆ ಬರುವ ಸಂಬಳದಲ್ಲಿ ಕಡಿಮೆಯಾಗುವ ಸಾಧ್ಯತೆ ಇದೆ. ಕೋವಿಡ್ ಹೊಡೆತದಿಂದ ಉದ್ಯೋಗದಾತರು ಮತ್ತು ಉದ್ಯೋಗಿಗಳು ಸಾಕಷ್ಟು ಸಂಕಟವನ್ನು ಅನುಭವಿಸಿದ್ದಾರೆ. ಇಂಥ ಸ್ಥಿತಿಯಲ್ಲಿ ಕೇಂದ್ರ ಸರಕಾರವು ಏಪ್ರಿಲ್ 1ರಿಂದ ಜಾರಿಗೆ ತರಲು ಹೊರಟಿರುವ ವೇತನ ಸಂಹಿತೆಯನ್ನು ಅಳವಡಿಸಿಕೊಳ್ಳುವುದಕ್ಕಾಗಿ ಮತ್ತು ಪರಿಹಾರ ವೆಚ್ಚಗಳನ್ನು ನಿರ್ವಹಿಸಲು ಕಂಪನಿಗಳು ತಮ್ಮ ಒಟ್ಟಾರೆ ವೇತನ ರಚನೆಯಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗಿದೆ.

ಕೇಂದ್ರ ಸರಕಾರವು ತನ್ನ ವ್ಯಾಪ್ತಿಯಲ್ಲಿ ಬರುವ 29 ಕಾನೂನುಗಳನ್ನು ಒಂದುಗೂಡಿಸಿ, ವೇತನ ಮತ್ತು ಸಾಮಾಜಿಕ ಭದ್ರತೆ ಸೇರಿದಂತೆ ಒಟ್ಟು ನಾಲ್ಕು ಸಂಹಿತೆಗಳನ್ನು ಸಿದ್ಧಪಡಿಸಿದೆ. ''ಕಾರ್ಮಿಕ ವೇತನ ಸಂಹಿತೆಯನ್ನು ಹೊಸ ಆಲೋಚನೆಗಳಿಂದ ಪರಿಚಯಿಸಲಾಗುತ್ತಿದೆ. ಆದರೆ, ಅತಿ ಮಹತ್ವದ ಸಂಗತಿ ಏನಂದರೆ; ವೇತನದ ವ್ಯಾಖ್ಯಾನ ಬದಲಾಗಲಿದೆ. ಸರಕಾರ ಅನುಷ್ಠಾನಗೊಳಿಸಲಿರುವ ನಾಲ್ಕೂ ಸಂಹಿತೆಗಳಲ್ಲಿ ಇದು ಅಡಕವಾಗಿದ್ದು, ಟೇಕ್ ಹೋಮ್ ಸಂಬಳ ಕಡಿಮೆಯಾಗಲಿದೆ ಎಂಬ ಕಹಿಸತ್ಯದೊಂದಿಗೆ ಉದ್ಯೋಗದಾತರು ಮತ್ತು ಉದ್ಯೋಗಿಗಳು ಈ ಹೊಸ ವ್ಯವಸ್ಥೆಯನ್ನು ಅನುಸರಿಸಬೇಕಾಗುತ್ತದೆ,'' ಎನ್ನುತ್ತಾರೆ ಮುಂಬೈನ ನಿಶ್ಚಿತ್ ದೇಸಾಯಿ ಅಸೋಸಿಯೇಟ್ಸ್ ಮುಖ್ಯಸ್ಥ (ಎಚ್ಆರ್ ಕಾನೂನುಗಳು) ವಿಕ್ರಮ್ ಶ್ರಾಫ್ ಅವರು.

**Media Coverage**

| Publication | Date | Edition | Link | Headline |
|---|---|---|---|---|
| Pehal News | 10 Feb 2020 | Online | https://www.pehalnews.in/will-new-wage-code-hit-your-take- | Will new wage code hit your take-home |

To read more click on the link